ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

## Monthly Magazine

ಸಂಪುಟ 8 ಸಂಚಿಕೆ 12 ಡಿಸೆಂಬರ್ 2023




ನೊಯಿಡಾದ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಆಕಾಡೆಮಿಯಲ್ಲಿ ಸೀಪಾ ಆಯೋಜಿಸಿದ್ದ ಸುಸ್ಥಿರ ಭಾರತ 2023 ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರು ಉದ್ಘಾಟಿಸಿದರು. ಶ್ರೀ ಹೆಚ್.ಆರ್. ಮಹದೇವಸ್ವಾಮಿ, ಡಾ. ರಘುರಾಮ್ ಅರ್ಜುನನ್, ಪ್ರೊ. ಆರ್.ಪಿ. ಗುಪ್ತಾ, ಡಾ. ಸಿ.ಜಿ. ಬೆಟಸೂರಮಠ ಮತ್ತು ಪ್ರೊ. ಅಮರ್ಜೀತ್ ಸಿಂಗ್‌ರವರುಗಳಿದ್ದಾರೆ (21 ನವೆಂಬರ್ 2023)




ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಅಲೈಡ್ ಹೆಲ್ತ್ ಸೈನ್ಸಸ್‌ನ ಪದವೀಧರರ ದಿನಾಚರಣೆಯಲ್ಲಿ ಡಾ. ಪ್ರವೀಣ್ ಕುಲಕರ್ಣಿ, ಡಾ. ಎಂ.ಎನ್. ಸುಮಾ, ಡಾ. ಹೆಚ್. ಬಸವನಗೌಡಪ್ಪ, ಡಾ. ಸಿ.ಜಿ. ಬೆಟಸೂರಮಠ, ಡಾ. ಸುಚೇತಾ ಬ್ಯಾನರ್ಜಿ ಕುರುಂದ್ಕರ್, ಡಾ. ಬಿ.ಎಲ್. ಸುಜಾತ ರಾಥೋಡ್, ಡಾ. ಸುರೀಂದರ್ ಸಿಂಗ್, ಡಾ. ಸುಧೀಂದ್ರ ಭಟ್, ಡಾ. ವಿಶಾಲ್ ಕುಮಾರ್ ಗುಪ್ತ, ಡಾ. ಅಮಿತಾಬ್ ದ್ವಿವೇದಿಯವರುಗಳೊಂದಿಗೆ ಪದಕ ಮತ್ತು ಪ್ರಶಸ್ತಿ ವಿಜೇತರುಗಳಿದ್ದಾರೆ (31 ಅಕ್ಟೋಬರ್ 2023)




ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಮೂರು ದಿನಗಳ ಅಂತಾರಾಷ್ಟ್ರೀಯ ಕ್ಷಯರೋಗ ಸಮಾವೇಶವನ್ನು ಕೇಂದ್ರ ಸಚಿವರಾದ ಶ್ರೀ ಭಗವಂತ ಖೂಬಾರವರು ಉದ್ಘಾಟಿಸಿದರು. ಡಾ. ಬಿ. ಸುರೇಶ್, ಡಾ. ಬಿ.ಎಸ್. ಜಯರಾಜ್, ಡಾ. ಸಲೀಲ್ ಭಾರ್ಗವ್, ಶ್ರೀ ಎ. ನಮಃಶಿವಾಯಂ, ಶ್ರೀಮತಿ ವಾಸಂತಿ ನಮಃಶಿವಾಯಂ, ಡಾ. ಸಿ.ಜಿ. ಬೆಟಸೂರಮಠ, ಡಾ. ರಾಜೇಂದ್ರ ಪಾಂಡುರಂಗ ಜೋಶಿ, ಡಾ. ಸುರೀಂದರ್ ಸಿಂಗ್, ಡಾ. ಬಿ. ಮಂಜುನಾಥ್‌ರವರುಗಳಿದ್ದಾರೆ (22 ನವೆಂಬರ್ 2023)

## ಸರ್ಕಾರದಿಂದ ಕ್ಷಯರೋಗಿಗಳ ದತ್ತು

ಕ್ಷಯವು ಬಡವರನ್ನು ಕಾಡುವ ಕಾಯಿಲೆ. ಅಪೌಷ್ಟಿಕತೆ ಇದಕ್ಕೆ ಪ್ರಮುಖ ಕಾರಣವಾಗಿದೆ. ಸರ್ಕಾರದಿಂದ ಕ್ಷಯ ರೋಗಿಗಳನ್ನು ದತ್ತು ಪಡೆದು ಪೋಷಿಸುವ ಯೋಜನೆಯನ್ನು ಜಾರಿಗೊಳಿಸಲಾಗಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ರಾಜ್ಯ ಖಾತೆ ಸಚಿವರಾದ ಶ್ರೀ ಭಗವಂತ ಖೂಬಾರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 22.11.2023ರಂದು ಆಯೋಜಿಸಿದ್ದ ಮೂರು ದಿನಗಳ ಅಂತಾರಾಷ್ಟ್ರೀಯ ಕ್ಷಯರೋಗ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು ಇತ್ತೀಚಿನ ದಿನಗಳಲ್ಲಿ ಸರ್ಕಾರ ಕ್ಷಯಕ್ಕೆ ಉಚಿತವಾಗಿ ಚಿಕಿತ್ಸೆ ನೀಡುತ್ತಿದೆ. ಪ್ರತಿ ರೋಗಿಯನ್ನು ಆರು ತಿಂಗಳ ಕಾಲ ದತ್ತು ಪಡೆದು ಪೋಷಿಸುವ ಯೋಜನೆಗೆ ಸರ್ಕಾರ ಚಾಲನೆ ನೀಡಿದೆ ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ಕ್ಷಯರೋಗವು ಜಾಗತಿಕವಾಗಿ ಎದುರಿಸುತ್ತಿರುವ ಆರೋಗ್ಯ ಸವಾಲುಗಳಲ್ಲಿ ಒಂದು. ವೈದ್ಯಕೀಯ ವಿಜ್ಞಾನದ ಪ್ರಗತಿಯ ಹೊರತಾಗಿಯೂ ವಿಶ್ವದಾದ್ಯಂತ ಲಕ್ಷಾಂತರ ಜನರ ಆರೋಗ್ಯದ ಮೇಲೆ ಪರಿಣಾಮ ಬೀರುವ ಪ್ರಮುಖ ಕಾಯಿಲೆಯಾಗಿದೆ. ಆರಂಭಿಕ ಪತ್ತೆ ಮತ್ತು ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡುವುದರೊಂದಿಗೆ ಇದನ್ನು ಪರಿಣಾಮಕಾರಿಯಾಗಿ ಎದುರಿಸುವುದು ಅತ್ಯಗತ್ಯ. ಸಾರ್ವಜನಿಕ ಜಾಗೃತಿಯು ಇದನ್ನು ತಡೆಗಟ್ಟುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ನೈರ್ಮಲ್ಯ, ಶುದ್ಧವಾದ ಗಾಳಿ ಸೇವನೆ, ಸೋಂಕಿತ ವ್ಯಕ್ತಿಗಳೊಂದಿಗಿನ ನಿಕಟ ಸಂಪರ್ಕದಿಂದ ದೂರವಿರುವುದು, ನಿಯಮಿತ ಆರೋಗ್ಯ ತಪಾಸಣೆಗಳಿಂದ ಇದನ್ನು ಹರಡದಂತೆ ತಡೆಯಬಹುದು ಎಂದು ತಿಳಿಸಿದರು.

ಪಾಂಡಿಚೇರಿ ಗೃಹ ಸಚಿವರಾದ ಶ್ರೀ ಎ. ನಮಃಶಿವಾಯಂರವರು ಕೋವಿಡ್ ಕಾರಣದಿಂದ ಇಡೀ ಮನುಕುಲ ತತ್ತರಿಸಿದೆ. ಆನಂತರದಲ್ಲಿ ವೈದ್ಯಕೀಯ ಸಂಶೋಧನೆಗೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಅಪೌಷ್ಟಿಕತೆಯಂತಹ ಕಾರಣಗಳಿಂದಾಗಿ ಕೆಳವರ್ಗದ ಸಮುದಾಯಗಳಲ್ಲಿ ಈ ಸಮಸ್ಯೆಗಳು ಹೆಚ್ಚಾಗಿವೆ. ಜನರಲ್ಲಿ ಆರೋಗ್ಯ ಕಾಳಜಿ ಕಡಿಮೆಯಾಗುತ್ತಿದೆ. ಈ ದಿಸೆಯಲ್ಲಿ ಜಾಗೃತಿಯೆಡೆಗೆ ನಾವು ಗಮನಹರಿಸಬೇಕು ಎಂದು ಹೇಳಿದರು.

ಭೋಪಾಲ್‌ನ ಗಾಂಧಿ ವೈದ್ಯಕೀಯ ಕಾಲೇಜಿನ ಡೀನ್‌ರಾದ ಡಾ. ಸಲೀಲ್ ಭಾರ್ಗವ ಮಾತನಾಡಿದರು. ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಸುರಿಂದರ್ ಸಿಂಗ್, ಡಾ. ಬಿ. ಮಂಜುನಾಥ್ ಉಪಸ್ಥಿತರಿದ್ದರು. ಡಾ. ಡಿ. ಸುನೀಲ್‌ಕುಮಾರ್ ಸ್ವಾಗತಿಸಿದರು. ಡಾ. ಬಿ.ಎಸ್. ಜಯರಾಜ್, ಡಾ. ಎಂ.ಎನ್. ಸುಮಾ, ಡಾ. ಪ್ರವೀಣ್ ಕುಲಕರ್ಣಿ ಅತಿಥಿಗಳನ್ನು ಪರಿಚಯಿಸಿದರು. ಡಾ. ಸೌಪಾಕೀಯಾ ಮನಿಮೋಝಿ ಪ್ರಾರ್ಥಿಸಿದರು. ಡಾ. ನಯನಾ ಶಾಬಾದಿ ವಂದಿಸಿದರು. □

## ನಿರಂತರ ಕಲಿಕೆಯಿಂದ ಮಾತ್ರ ಬೆಳವಣಿಗೆ ಸಾಧ್ಯ

ಪರಿಶ್ರಮವೇ ಯಶಸ್ಸಿನ ಗುಟ್ಟು. ಪ್ರತಿದಿನ ಕಲಿಯುವುದೇ ಜ್ಞಾನ. ಕಲಿಯುವುದನ್ನು ನಿಲ್ಲಿಸಿದರೆ ಬೆಳವಣಿಗೆ ಕುಂಠಿತವಾಗುತ್ತದೆ. ನಿರಂತರ ಕಲಿಕೆಯಿಂದ ಮಾತ್ರ ಬೆಳವಣಿಗೆ ಸಾಧ್ಯ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಜೈವಿಕ ತಂತ್ರಜ್ಞಾನ ಇಲಾಖೆಯ ಟ್ರಾನ್ಸ್‌ಲೇಷನಲ್ ಹೆಲ್ತ್ ಸೈನ್ಸ್ ಅಂಡ್ ಟೆಕ್ನಾಲಜಿ ಇನ್ಸ್ಟಿಟ್ಯೂಟ್‌ನ ಕ್ಲಿನಿಕಲ್ ಡೆವಲಪ್‌ಮೆಂಟ್ ಸರ್ವೀಸಸ್ ಏಜೆನ್ಸಿಯ ತರಬೇತಿ ವಿಭಾಗದ ಮುಖ್ಯಸ್ಥರಾದ ಡಾ. ಸುಚೇತಾ ಬ್ಯಾನರ್ಜಿ ಕುರುಂದ್ಕರ್‌ರವರು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 31.10.2023ರಂದು ನಡೆದ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಅಲೈಡ್ ಹೆಲ್ತ್

ಸೈನ್ಸಸ್‌ನ ಪದವೀಧರರ ದಿನಾಚರಣೆಯಲ್ಲಿ ಮಾತನಾಡಿದ ಅವರು ಯಶಸ್ಸಿಗೆ ಯಾವುದೇ ಅಡ್ಡ ದಾರಿಗಳಿಲ್ಲ. ಯಾವುದೇ ರಹಸ್ಯ ಸೂತ್ರಗಳೂ ಇಲ್ಲ. ಅದಕ್ಕೆ ಬೇಕಿರುವುದು ಪರಿಶ್ರಮ ಮಾತ್ರ. ಎಂದಿಗೂ ಬೀಳದೇ ಇರುವುದು ದೊಡ್ಡ ಸಾಧನೆಯಲ್ಲ. ಬಿದ್ದ ನಂತರ ಮತ್ತೆ ಎದ್ದು ನಿಲ್ಲುವುದು ನಿಜವಾದ ಸಾಧನೆ ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಡಾ. ಬಿ.ಎಲ್. ಸುಜಾತ ರಾಥೋಡ್‌ರವರು ಆರೋಗ್ಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವವರು ರೋಗಿಗಳನ್ನು ಪ್ರೀತಿ, ಗೌರವ, ಸಹಾನುಭೂತಿಗಳಿಂದ ಕಾಣಬೇಕು. ಹೊಸ ಸಂಶೋಧನೆಯಲ್ಲಿ ತೊಡಗಿಕೊಳ್ಳಬೇಕು. ವೈದ್ಯಕೀಯ ಕ್ಷೇತ್ರದ ಸುಧಾರಣೆಗೆ ಅವಿರತವಾಗಿ ಶ್ರಮಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 313 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ. ಸುರೇಶ್, ಡಾ. ಸುರೀಂದರ್ ಸಿಂಗ್‌ರವರು ಉಪಸ್ಥಿತರಿದ್ದರು. ಕು. ಮೇಧಾ ಮತ್ತು ಕು. ಶ್ರದ್ಧಾ ಪ್ರಾರ್ಥಿಸಿದರು. ಡಾ. ಎಂ.ಎನ್. ಸುಮಾ ಸ್ವಾಗತಿಸಿದರು. ಡಾ. ವಿಜಯಾ ವಾಗೀಶ ಪದಕ ಮತ್ತು ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳ ಹೆಸರು ಪ್ರಕಟಿಸಿದರು. ಡಾ. ಪ್ರವೀಣ್ ಕುಲಕರ್ಣಿ ವಂದಿಸಿದರು. ಡಾ. ಎನ್. ಅಶ್ವಿನಿ ಕಾರ್ಯಕ್ರಮ ನಿರೂಪಿಸಿದರು.

## ರೈತ ಶಕ್ತಿದಾತನೂ ಆಗಿದ್ದಾನೆ

ರೈತನು ಈಗ ಕೇವಲ ಅನ್ನದಾತ ಮಾತ್ರವಲ್ಲ, ಆತ ಶಕ್ತಿದಾತನೂ ಆಗಿದ್ದಾನೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರು ಹೇಳಿದರು.

ನೊಯಿಡಾದ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿಯಲ್ಲಿ ಪರಮಪೂಜ್ಯ ಜಗದ್ಗುರುಗಳವರು ದಿವ್ಯ ಸಾನ್ನಿಧ್ಯದಲ್ಲಿ ಸೀಪಾ ಸಂಸ್ಥೆಯು ದಿನಾಂಕ 21.11.2023ರಂದು ಆಯೋಜಿಸಿದ್ದ ಸುಸ್ಥಿರ ಭಾರತ 2023 ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು ಭಾರತದಲ್ಲಿ ಇಂದು ಎಥಿನಾಲ್ ಬಳಕೆ ಹೆಚ್ಚುತ್ತಿದೆ. ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಕಡಿಮೆಯಾಗುತ್ತಿದೆ. ರೈತರು ರಸಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ಬಳಸುವುದನ್ನು ಕಡಿಮೆ ಮಾಡಬೇಕು. ಇದು ಅವರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ. ರಾಸಾಯನಿಕಗಳಿಗೆ ಬದಲಾಗಿ ಸಾವಯುವ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಜನರ ಆರೋಗ್ಯವು ಉತ್ತಮವಾಗಿರುತ್ತದೆ. ಆಗ ಸದೃಢವಾದ ದೇಶವನ್ನು ಕಟ್ಟಲು ಸಾಧ್ಯವಾಗುತ್ತದೆ. ಜಗತ್ತಿನಲ್ಲಿ ಯಾವ ವಸ್ತುವಾಗಲಿ, ವ್ಯಕ್ತಿಯಾಗಲಿ ಅನವಶ್ಯಕವಲ್ಲ. ಆದರೆ ಅವುಗಳನ್ನು ಹೇಗೆ ಬಳಸುತ್ತೇವೆ ಎಂಬುದು ಮುಖ್ಯವಾಗುತ್ತದೆ. ಪರಿಸರಕ್ಕೆ ಪೂರಕವಾದ ಸೌರ, ವಾಯು ಶಕ್ತಿಯನ್ನು ಹೆಚ್ಚು ಬಳಸಬೇಕು. ಶ್ರೀ ಸುತ್ತೂರು ಮಠವು ಆಧ್ಯಾತ್ಮ ಮತ್ತು ವಿಜ್ಞಾನದ ಸಮ್ಮಿಲನದ ಕೇಂದ್ರವಾಗಿದೆ. ಎರಡನ್ನೂ ಸಮತೋಲನಗೊಳಿಸಿಕೊಂಡು ಸಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪರಮಪೂಜ್ಯ ಜಗದ್ಗುರುಗಳವರು ಮಾತನಾಡಿ ಪ್ರಕೃತಿ ಮತ್ತು ಮಾನವನ ನಡುವೆ ಸಾಮರಸ್ಯದ ಸಹಬಾಳ್ವೆಯನ್ನು ಸೃಷ್ಟಿಸಲು ನಾವೀನ್ಯತೆಯನ್ನು ಅಳವಡಿಸಿಕೊಳ್ಳಬೇಕಿದೆ. ಕನಸುಗಳು ಮತ್ತು ಆಕಾಂಕ್ಷೆಗಳೊಂದಿಗೆ ಸುಸ್ಥಿರ ಭವಿಷ್ಯಕ್ಕಾಗಿ ಒಂದಾಗಿ ಸಾಗಬೇಕಿದೆ. ಸುಸ್ಥಿರತೆ ಎಂಬುದು ಇಂದು ಅತ್ಯಂತ ಅರ್ಹವಾದ ನಿರ್ಣಾಯಕ ವಿಷಯವಾಗಿದೆ. ಎಲ್ಲಾ ಜೀವಿಗಳು ಇದನ್ನು ತಮ್ಮ ಆದ್ಯತೆಯಾಗಿ ಪರಿಗಣಿಸಬೇಕು. ಇಂತಹ ಸಮ್ಮೇಳನಗಳು ಪ್ರಕೃತಿ ಮತ್ತು ಆರ್ಥಿಕ ಅಭಿವೃದ್ಧಿಯ ನಡುವೆ ಸಾಮರಸ್ಯವನ್ನು ತರುವುದರೊಂದಿಗೆ, ಸರ್ಕಾರ ಮತ್ತು ಸಮಾಜದ ಬದ್ಧತೆಯನ್ನು ಹೆಚ್ಚಿಸುತ್ತವೆ. ಸುಸ್ಥಿರ ಭಾರತಕ್ಕಾಗಿ 'ಸೀಪಾ'ದಂತಹ ಸಂಸ್ಥೆಗಳು ಕೈಗೊಳ್ಳುತ್ತಿರುವ ಜಾಗೃತಿಯ ಕಾರ್ಯಕ್ರಮಗಳು ಶ್ಲಾಘನೀಯ ಎಂದು ತಿಳಿಸಿದರು.

ಸೋಲಾರ್ ಎನರ್ಜಿ ಕಾರ್ಪೊರೇಷನ್ ಆಫ್ ಇಂಡಿಯಾದ ಅಧ್ಯಕ್ಷರಾದ ಪ್ರೊ. ಆರ್.ಪಿ. ಗುಪ್ತಾ, ಸೀಪಾ ಅಧ್ಯಕ್ಷರಾದ ಡಾ. ರಘುರಾಮ್ ಅರ್ಜುನನ್, ಎಪಿಜೆ ಅಬ್ದುಲ್ ಕಲಾಂ ವಿಶ್ವವಿದ್ಯಾಲಯ ಕುಲಪತಿಗಳಾದ ಪ್ರೊ. ಜೆ.ಪಿ. ಪಾಂಡೆರವರುಗಳು ಮಾತನಾಡಿದರು. ಡಾ. ಸಿ.ಜಿ. ಬೆಟಸೂರಮಠರವರು ಸ್ವಾಗತಿಸಿದರು. ಪ್ರೊ. ಅಮರ್ಜಿತ್ ಸಿಂಗ್ ವಂದಿಸಿದರು. ಶ್ರೀಮತಿ ಪರವೀಣ್ ಮೊನ್‌ತರೆಂಗ್ ಕಾರ್ಯಕ್ರಮ ನಿರೂಪಿಸಿದರು.

## ಯುವ ವೈದ್ಯ ಸಮುದಾಯವು ಶಾಸ್ತ್ರಜ್ಞಾನ ಮತ್ತು ಕರ್ಮಕೌಶಲ್ಯತೆಯನ್ನು ರೂಢಿಸಿಕೊಳ್ಳಬೇಕು



ಮೈಸೂರಿನ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಕಾಲೇಜಿನ ವಿಶಿಖಾನುಪ್ರವೇಶ ಪದವಿ ಪ್ರದಾನ ಸಮಾರಂಭದಲ್ಲಿ ಗಣ್ಯರುಗಳೊಂದಿಗೆ ಪದವೀಧರರು.

ಸಮಾಜದ ಆರೋಗ್ಯ ಸವಾಲುಗಳಿಗೆ ಗುಣಾತ್ಮಕ ಹಾಗೂ ಪರಿಣಾಮಕಾರಿ ಪರಿಹಾರೋಪಾಯಗಳನ್ನು ನೀಡಬೇಕು. ಯುವ ವೈದ್ಯ ಸಮುದಾಯವು ಶಾಸ್ತ್ರಜ್ಞಾನ ಮತ್ತು ಕರ್ಮ ಕೌಶಲ್ಯತೆಯನ್ನು ರೂಢಿಸಿಕೊಳ್ಳಬೇಕು ಎಂದು ನವದೆಹಲಿಯ ಆಯುಷ್ ಇಲಾಖೆಯ ಎನ್‌ಸಿಐಎಸ್‌ಎಂ ಹಾಗೂ ಎಂಎಆರ್‌ಬಿಎಸ್‌ಐಎಂನ ಅಧ್ಯಕ್ಷರಾದ ಡಾ. ರಘುರಾಮ್ ಭಟ್ಟರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ದಿನಾಂಕ 24.11.2023 ರಂದು ನಡೆದ ಕಾಲೇಜಿನ ವಿಶಿಖಾನುಪ್ರವೇಶ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು ಮುಂದಿನ ದಶಕಗಳಲ್ಲಿ ಆಯುರ್ವೇದ ವೈದ್ಯ ಪದ್ಧತಿಯು ಪ್ರಮುಖ ಪ್ರಾಥಮಿಕ ಆರೋಗ್ಯ ಪದ್ಧತಿಯಾಗಬೇಕು. ನಿರಂತರ ಅಧ್ಯಯನ, ಅಧ್ಯಾಪನ ಹಾಗೂ ತಂತ್ರಜ್ಞಾನದ ಅಳವಡಿಕೆ ಹೊಸ ಸಂಶೋಧನೆಗಳಿಗೆ ದಾರಿಯಾಗಿದೆ. ಹೊಸ ಆವಿಷ್ಕಾರಗಳು ಹಾಗೂ ಅನ್ವೇಷಣೆಗಳು ಭವಿಷ್ಯದ ಆರೋಗ್ಯ ಸವಾಲುಗಳಿಗೆ ಉತ್ತರವಾಗಬಲ್ಲವು ಎಂದು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಆಯುರ್ವೇದ ವೈದ್ಯ ಪದ್ಧತಿಯು ಇಂದಿನ ಅನೇಕ ಆರೋಗ್ಯ ಸಮಸ್ಯೆಗಳಿಗೆ ಹೆಚ್ಚು ಪರಿಣಾಮಕಾರಿಯಾಗಿದೆ. ಯುವ ವೈದ್ಯರು ಹೆಚ್ಚು ಹೆಚ್ಚು ಅಧ್ಯಯನ ಹಾಗೂ ವಿವೇಚನಾತ್ಮಕ ಮನಃಸ್ಥಿತಿಯನ್ನು ಬೆಳೆಸಿಕೊಂಡು ಸಮಾಜದ ಸ್ವಾಸ್ಥ್ಯ ಪಾಲನೆಯಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು ಪ್ರಸ್ತುತ ಕಾಲದ ಆಯುರ್ವೇದ ಪದ್ಧತಿ ಸ್ಥಿತಿ ಹಾಗೂ ಭವಿಷ್ಯದ ವಿವಿಧ ವೃತ್ತಿಪರತೆಯ ಅವಕಾಶಗಳ ಕುರಿತು ಮಾತನಾಡಿದರು. ಯುವ ವೈದ್ಯರು ಭಕ್ತಿ ಹಾಗೂ ಶ್ರದ್ಧೆಯಿಂದ ವೃತ್ತಿಯಲ್ಲಿ ತೊಡಗಿಸಿಕೊಂಡು ಸಂಸ್ಥೆ ಹಾಗೂ ಪೋಷಕರಿಗೆ ಒಳ್ಳೆಯ ಹೆಸರು ತಂದುಕೊಡಬೇಕೆಂದು ಹೇಳಿದರು.

ಕು. ಮೈತ್ರಿ ಹಾಗೂ ಕು. ಅಮಲರವರು ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಸರ್ಬೇಶ್ವರ್‌ಕರ್ ಸ್ವಾಗತಿಸಿದರು. ಡೀನ್‌ರವರಾದ ಡಾ. ರಾಜೇಶ್ ಅ. ಉದಪುಡಿ

ಪ್ರತಿಜ್ಞಾವಿಧಿ ಬೋಧಿಸಿದರು. ಡಾ. ಡಿ.ಟಿ. ಉಷಾರವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ನಾತಕ ವಿದ್ಯಾರ್ಥಿಗಳ ರ್‍ಯಾಂಕ್ ಪಟ್ಟಿಯನ್ನು ಪ್ರಕಟಿಸಿದರು. ಡಾ. ಸ್ಪಂದನ ಹಾಗೂ ಡಾ. ಸಂಜನ ಹಿಮಾಲಯ ಡ್ರಗ್ಸ್ ಕಂಪನಿಯವರು ನೀಡುವ 'ಜೀವಕ' ಹಾಗೂ 'ಆಯುವಿಶಾರದ' ನಗದು ಪ್ರಶಸ್ತಿಯನ್ನು ಪಡೆದರು. ಡಾ. ಎಸ್. ಅತ್ರಿಯ, ಡಾ. ಅನುರಾಧ, ಡಾ. ಜಿ. ಸಿಂಧು ಅತ್ಯುನ್ನತ ಶ್ರೇಣಿ ಪಡೆದರೆ, ಡಾ. ಎಸ್. ರಾಧಿಕಾ ಹಾಗೂ ಡಾ. ನಾಗರಾಜ ಬೆಸ್ಟ್ ಔಟ್ ಗೋಯಿಂಗ್ ಪ್ರಶಸ್ತಿಯನ್ನು ಸ್ನಾತಕೋತ್ತರ ಹಾಗೂ ಪದವಿ ವಿಭಾಗಗಳಲ್ಲಿ ಕ್ರಮವಾಗಿ ಪಡೆದರು. ಅಲ್ಲದೆ 93 ಸ್ನಾತಕ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ರ್‍ಯಾಂಕ್ ವಿಜೇತರು ಗಣ್ಯರಿಂದ ಪ್ರಶಸ್ತಿ ಪತ್ರಗಳನ್ನು ಪಡೆದರು.

ಡಾ. ಡಿ. ಸಂಧ್ಯಾರಾಣಿ ಪದವಿ ಸ್ವೀಕರಿಸುವ ವಿದ್ಯಾರ್ಥಿಗಳ ಹೆಸರುಗಳನ್ನು ಓದಿದರು. ಡಾ. ಶಾಲಿನಿ ಹಾಗೂ ಡಾ. ಸ್ಪಂದನ ಅನುಭವಗಳನ್ನು ಹಂಚಿಕೊಂಡರು. ಡಾ. ಎಂ.ಡಿ. ಬೀನಾ ವಂದಿಸಿದರು. ಡಾ. ಬಿ.ಜಿ. ಮಧುಸೂದನ್ ಕಾರ್ಯಕ್ರಮವನ್ನು ನಿರೂಪಿಸಿದರು.

## ರಾಜೇಂದ್ರ ಶ್ರೀಗಳು ಅಂತಃಕರಣಿಗಳು ಮತ್ತು ದೂರದೃಷ್ಟಿಯುಳ್ಳವರಾಗಿದ್ದರು



ರಾಜೇಂದ್ರ ಶ್ರೀಗಳು ಅಂತಃಕರಣಿಗಳು ಮತ್ತು ದೂರದೃಷ್ಟಿಯುಳ್ಳವರಾಗಿದ್ದರು ಎಂದು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಶ್ರೀ ಎನ್. ಜಯರಾಮ್‌ರವರು ಹೇಳಿದರು.

ಜೆಎಸ್‌ಎಸ್ ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 5.11.2023ರಂದು ಆಯೋಜಿಸಿದ್ದ ರಾಜೇಂದ್ರ ಶ್ರೀಗಳವರ 108ನೇ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡುತ್ತಾ ಯಾವುದೇ ಹಣವಿಲ್ಲದೆ ನಾನು ಆಶ್ರಯಕ್ಕಾಗಿ ಶ್ರೀಗಳ ಮುಂದೆ ನಿಂತಾಗ, ನನಗೆ ಹಾಸ್ಟೆಲ್‌ನಲ್ಲಿ ಪೂರ್ಣವಾಗಿ ಉಚಿತ ಸೌಲಭ್ಯ ನೀಡಿ ಸಹಾಯ ಮಾಡಿದ್ದು ನನ್ನ ಭವಿಷ್ಯ ರೂಪುಗೊಳ್ಳಲು ಸಹಕಾರಿಯಾಯಿತು ಎಂದು ಸ್ಮರಿಸಿದರು.

ದಾವಣಗೆರೆ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಉಮಾ ಪ್ರಶಾಂತ್‌ರವರು ಜೆಎಸ್‌ಎಸ್ ಸಂಸ್ಥೆ ಮೌಲ್ಯಾಧಾರಿತ ಶಿಕ್ಷಣವನ್ನು ನೀಡುತ್ತಿದೆ. ಈ ಸಂಸ್ಥೆಯಲ್ಲಿ ನನ್ನ ಅಮೂಲ್ಯವಾದ ಎಂಟು ವರ್ಷಗಳನ್ನು ಕಳೆದಿದ್ದೇನೆ. ಇಲ್ಲಿ ದೊರೆತ ಅನುಭವ ನನ್ನ ವ್ಯಕ್ತಿತ್ವದ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಶ್ರೀ ಎಲ್. ರೇವಣಸಿದ್ಧಯ್ಯ ಅಧ್ಯಕ್ಷತೆ ವಹಿಸಿದ್ದರು. ಡಾ. ಮಹೇಶ್ವರ ನುಡಿನಮನ ಸಲ್ಲಿಸಿದರು. ಶ್ರೀ ಎ.ಎಸ್. ಚನ್ನಬಸಪ್ಪ ಸ್ವಾಗತಿಸಿದರು. ಶ್ರೀ ಮಂಟೇಲಿಂಗಾಚಾರ್ ವಂದಿಸಿದರು.

# ಸುತ್ತೂರು ಶ್ರೀಕ್ಷೇತ್ರದಲ್ಲಿ ಶಿವದೀಪೋತ್ಸವದ ಸಂಭ್ರಮ



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶಿವದೀಪೋತ್ಸವದ ಅಂಗವಾಗಿ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಉಪನ್ಯಾಸ ನೀಡಿದರು

ಸುತ್ತೂರು ಶ್ರೀ ಕ್ಷೇತ್ರದಲ್ಲಿ ನವೆಂಬರ್ 26ರಂದು ಶಿವದೀಪೋತ್ಸವದ ಅಂಗವಾಗಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಸೋಮೇಶ್ವರ, ಶ್ರೀ ಮಹದೇಶ್ವರ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಾಲಯಗಳಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಿದವು.

ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಉಪನ್ಯಾಸ ನೀಡುತ್ತಾ, ದೀಪಗಳನ್ನು ಬೆಳಗಿಸುವುದರ ಮೂಲಕ ಶಿವನ ಆರಾಧನೆಯನ್ನು ಮಾಡುವುದೇ ಶಿವದೀಪೋತ್ಸವ. ಸುತ್ತೂರು ತೀರ್ಥ ಮತ್ತು ಕ್ಷೇತ್ರ ಎರಡೂ ಹೌದು, ಹೇಗೆಂದರೆ ಕಪಿಲಾ ತೀರದಲ್ಲಿರುವುದು ತೀರ್ಥ, ಶಿವರಾತ್ರೀಶ್ವರರ ತಪೋಭೂಮಿ ಕ್ಷೇತ್ರವಾಗಿದೆ. ಇಂದು ಸುತ್ತೂರು ಕರ್ತೃ ಗದ್ದುಗೆಯ ದೀಪಾಲಂಕಾರಗಳಿಂದ ಕಂಗೊಳಿಸುತ್ತಿದ್ದು, ಕೈಲಾಸವೇ ಭೂಮಿಗೆ ಇಳಿದು ಬಂದಂತೆ ಕಾಣುತ್ತಿದೆ. ದೀಪಗಳಿಂದ ದೀಪಗಳನ್ನು ಬೆಳಗಿಸುವುದು ಬೆಳಕಿನ ಮಹಿಮೆಯಾಗಿದೆ. ದೀಪವು ಜ್ಞಾನದ ಸಂಕೇತ ನಹೀ ಜ್ಞಾನೇನ ಸದೃಶ್ಯಂ ಎನ್ನುತ್ತಾ ಕತ್ತಲೆಯನ್ನು ಹೋಗಲಾಡಿಸಿ ಬೆಳಕನ್ನು ನೀಡುವುದು. ಪ್ರಪಂಚವನ್ನು ಜ್ಞಾನ ಮತ್ತು ದೀಪದ ಬೆಳಕಿನಿಂದ ತುಂಬಿಸಬಹುದು. ಈ ದಿನ ದೀಪವನ್ನು ಬೆಳಗಿಸಿ ತಮ್ಮ ಇಷ್ಟಾರ್ಥಗಳನ್ನು ಪ್ರಾರ್ಥನೆಯ ಮೂಲಕ ಈಡೇರಿಸಿಕೊಳ್ಳಬಹುದು. ಕತ್ತಲೆ ದುಷ್ಟಶಕ್ತಿ, ಬೆಳಕು ದೈವಶಕ್ತಿ, ಅಸತ್ಯದಿಂದ ಸತ್ಯದ ಕಡೆಗೆ, ಕತ್ತಲಿನಿಂದ ಬೆಳಕಿನೆಡೆಗೆ ಹೋಗುವುದೇ ದೀಪದ ಮಹಿಮೆ ಎಂದು ಬೆಳಕಿನ ಮಹತ್ವವನ್ನು ಕಥೆಗಳ ಮೂಲಕ ಮನಮುಟ್ಟುವಂತೆ ತಿಳಿಸಿಕೊಟ್ಟರು.

ಮುದ್ದೇಬಿಹಾಳ ಶಾಸಕರಾದ ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡರವರು ಜೀವನವನ್ನು ವ್ಯವಹಾರಿಕವಾಗಿ ನೋಡಬೇಡಿ, ಪ್ರೀತಿ ವಿಶ್ವಾಸದಿಂದ ಕಾಣಬೇಕು. ಇಲ್ಲಿ ಶಿಕ್ಷಣವನ್ನು ಪಡೆಯುತ್ತಿರುವ ನೀವೇ ಪುಣ್ಯವಂತರು. ಗುರುವಿನ ಆಶೀರ್ವಾದ ಸದಾ ನಿಮ್ಮ ಮೇಲೆ ಇರುತ್ತದೆ.

ಗುರಿ ನಿಮ್ಮದಾಗಲಿ, ನೀವು ಪ್ರಪಂಚದಾದ್ಯಂತ ಜ್ಞಾನ ಬೆಳಗಿಸುವ ವಿದ್ಯಾರ್ಥಿಗಳಾಗಿ ಎಂದು ಕಿವಿಮಾತು ಹೇಳಿದರು.

ಸಾಹಿತಿಗಳಾದ ಶ್ರೀ ಕುಂ. ವೀರಭದ್ರಪ್ಪನವರು ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ ಎಂಬ ಬಸವಣ್ಣನವರ ವಚನದಂತೆ ಜ್ಞಾನದ ಬೆಳಕನ್ನು ಸುತ್ತೂರು ಮಠವು ನಿರಂತರವಾಗಿ ಮಾಡುತ್ತಾ ಬರುತ್ತಿದೆ. ವಿದ್ಯೆಯನ್ನು ಕಲಿಯುವವರಿಗೆ ನಿದ್ದೆ ಮತ್ತು ಊಟದ ಅರಿವಿರುವುದಿಲ್ಲ. ಆದ್ದರಿಂದ ವಿದ್ಯೆಗೆ ಹೆಚ್ಚಿನ ಮಹತ್ವವನ್ನು ನೀಡಬೇಕು. ಜೆಎಸ್‌ಎಸ್ ಶಾಲೆಯು ಪುಟ್ಟ ಭಾರತವಿದ್ದಂತೆ, ದೇಶದ ಎಲ್ಲಾ ರಾಜ್ಯದ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಯಾವುದೇ ಜಾತಿ, ಮತ, ಧರ್ಮದ ಭೇದವಿಲ್ಲದೆ ಸರ್ವಜನಾಂಗದ ಶಾಂತಿಯ ತೋಟದಂತೆ ವಿಶ್ವಕ್ಕೆ ಸಂದೇಶವನ್ನು ಸಾರುತ್ತಿದೆ ಎಂದು ಸುತ್ತೂರು ಕ್ಷೇತ್ರದ ತಪೋಭೂಮಿಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಶಿವದೀಪೋತ್ಸವ (ಕೃತ್ತಿಕಾ ಮಹೋತ್ಸವ)ದಲ್ಲಿ ಮಹಾಮಂಗಳಾರತಿ, ಬೆಳ್ಳಿರಥದ ಪ್ರಾಕಾರೋತ್ಸವ ನೆರವೇರಿತು. ಸುತ್ತೂರು ಶಾಲೆಯ ಮಕ್ಕಳು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಶಿವದೀಪೋತ್ಸವದ ಅಂಗವಾಗಿ ದೇವಾಲಯಗಳಿಗೆ ಮಾಡಿದ್ದ ವಿಶೇಷ ದೀಪಾಲಂಕಾರ ನೆರೆದಿದ್ದ ಸಹಸ್ರಾರು ಭಕ್ತಾದಿಗಳ ಮನಕ್ಕೆ ಮುದ ನೀಡಿದರೆ, ಬಾಣ ಬಿರುಸುಗಳ ಪ್ರದರ್ಶನ ಹರ್ಷೋಲ್ಲಾಸ ಉಂಟುಮಾಡಿತು.

ಕಾರ್ಯಕ್ರಮದಲ್ಲಿ ಹುಲಿಯೂರುದುರ್ಗ, ಕುಂದೂರು ಮಠ, ನೀಲಕಂಠಸ್ವಾಮಿ ಮಠ, ಚುಂಚನಹಳ್ಳಿ, ಹೊನ್ನಲಗೆರೆ, ರಾಗಿಬೊಮ್ಮನಹಳ್ಳಿ, ಮಾದಾಪುರ, ಮಾಗಡಿ ಗುಮ್ಮಸಂದ್ರಮಠ, ಕುಣಿಗಲ್ ಹಿರೇಮಠ, ಕಮ್ಮಟಗಿ, ಕುಂಟೋಜಿ, ಚಕ್ರಬಾವಿ ಮೊದಲಾದ ಮಠಗಳ ಶ್ರೀಗಳು, ಹರಗುರು ಚರಮೂರ್ತಿಗಳು, ಶ್ರೀ ಎಸ್.ಪಿ. ಉದಯಶಂಕರ್, ಶ್ರೀ ಎಸ್. ಶಿವಕುಮಾರಸ್ವಾಮಿಯವರು, ಅಮೇರಿಕಾದ ವಿದ್ಯಾಶಂಕರ್ ದಂಪತಿ, ಮಂಡ್ಯದ ವಕೀಲರಾದ ಶ್ರೀ ಮಲ್ಲಿಕಾರ್ಜುನಸ್ವಾಮಿ ಕುಟುಂಬವರ್ಗ, ಗಣ್ಯರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಹಸ್ರಾರು ಭಕ್ತಾದಿಗಳು ಭಾಗವಹಿಸಿದ್ದರು.

## ರಾಷ್ಟ್ರೀಯ ಏಕತಾ ದಿನ

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 31.10.2023ರಂದು ಸರ್ದಾರ್ ವಲ್ಲಭಭಾಯಿ ಪಟೇಲ್‌ರವರ ಜನ್ಮದಿನದ ಪ್ರಯುಕ್ತ ರಾಷ್ಟ್ರೀಯ ಏಕತಾ ದಿನವನ್ನು ಆಚರಿಸಲಾಯಿತು.

ಪ್ರಾಂಶುಪಾಲರಾದ ಡಾ ಎಂ. ಪ್ರಭುರವರು ಮಾತನಾಡುತ್ತ 2018ರಲ್ಲಿ ಗುಜರಾತಿನಲ್ಲಿ ಜಗತ್ತಿನಲ್ಲಿಯೇ ಅತ್ಯಂತ ಎತ್ತರವಾದ ಸರ್ದಾರ್ ವಲ್ಲಭಭಾಯಿ ಪಟೇಲ್‌ರವರ ಲೋಹದ ಪ್ರತಿಮೆಯನ್ನು ದೇಶದ ಪ್ರತಿಗ್ರಾಮದಿಂದ ಲೋಹವನ್ನು ಸಂಗ್ರಹಿಸಿ ನಿರ್ಮಿಸಿದ್ದು ಅತ್ಯದ್ಭುತ ಸಂಗತಿಯಾಗಿದೆ ಎಂದು ತಿಳಿಸಿದರು.

ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀ ಹೆಚ್.ಜಿ. ನಟರಾಜನ್‌ರವರು ಮಾತನಾಡಿ ಪಟೇಲರು 565 ಸಂಸ್ಥಾನಗಳನ್ನು ಭಾರತದ ಒಕ್ಕೂಟಕ್ಕೆ ಸೇರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿ ಭಾರತದ ಐಕ್ಯತೆಯನ್ನು ಸಾಧಿಸಿ ಉಕ್ಕಿನ ಮನುಷ್ಯ ಎಂದೇ ಹೆಸರಾದರು. ಇವತ್ತಿನ ಏಕೀಕೃತ ಭಾರತವನ್ನು ನಾವು ನೋಡುವ ಸೌಭಾಗ್ಯವನ್ನು ಕರುಣಿಸಿದರು ಎಂದರು.

ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಹೆಚ್.ಎಂ. ನಾಗಭೂಷಣರವರು ಪ್ರತಿಜ್ಞಾವಿಧಿ ಬೋಧಿಸಿದರು. ಸಹಾಯಕ ಆಡಳಿತ ಅಧಿಕಾರಿಗಳಾದ ಶ್ರೀ ಹೆಚ್.ಬಿ. ಗಿರೀಶ್, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಶ್ರೀ ಸಿ.ಎಸ್. ಬಸವದತ್ತ ಮಹದೇವ ಪ್ರಸಾದ್, ಎಲ್ಲಾ ಅಧ್ಯಾಪಕ ಮತ್ತು ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ಜೆಎಸ್‌ಎಸ್ ರಂಗೋತ್ಸವ 2023



ದಿನಾಂಕ 27.11.2023ರಂದು ಜೆಎಸ್‌ಎಸ್ ಕಲಾಮಂಟಪದ ವತಿಯಿಂದ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ರಂಗೋತ್ಸವ –2023ರ ಉದ್ಘಾಟನೆ ನೆರವೇರಿತು. ಉದ್ಘಾಟನಾ ನುಡಿಗಳನ್ನಾಡಿದ ರಂಗತಜ್ಞರು, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀ ಪಿ. ಗಂಗಾಧರಸ್ವಾಮಿಯವರು ಸುತ್ತೂರು ಶ್ರೀಮಠವು ಕಲೆ, ಸಾಹಿತ್ಯ, ರಂಗಭೂಮಿಗೆ ಮಹತ್ತರ ಕೊಡುಗೆ ನೀಡಿದೆ. ಸಂಸ್ಥಾಪಕರಾದ ಪರಮಪೂಜ್ಯ ರಾಜೇಂದ್ರ ಶ್ರೀಗಳವರ ಜೀವನವನ್ನು ಆಧರಿಸಿದ ದಿವ್ಯಚೇತನ ನಾಟಕವನ್ನು ನಿರ್ದೇಶಿಸಿದಾಗ ಈ ಸಭಾಂಗಣದಲ್ಲೇ ಪರಮಪೂಜ್ಯ ದೇಶಿಕೇಂದ್ರ ಸ್ವಾಮಿಗಳು ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಮೆಚ್ಚಿದ್ದರಿಂದ ಪೂರ್ಣಾವಧಿಯ ರಂಗತಜ್ಞನಾಗಲು ಸಹಾಯವಾಯಿತು. ದಿವ್ಯಚೇತನ ನಾಟಕ ಯಶಸ್ವಿಯುತ 100 ಪ್ರದರ್ಶನ ಕಂಡಿದ್ದು ನನ್ನ ಬದುಕಿನ ದೊಡ್ಡ ಭಾಗ್ಯವಾಗಿದ್ದು, ಗುರುಪರಂಪರೆಯ ಆಶೋತ್ತರದಂತೆ ಬದುಕುತ್ತಿರುವೆ ಎಂದು ಶ್ರೀ ಮಠವನ್ನು ಸ್ಮರಿಸಿಕೊಂಡರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಮಾತನಾಡುತ್ತಾ, ಜೆಎಸ್‌ಎಸ್ ಕಲಾಮಂಟಪವು ಪರಮಪೂಜ್ಯ ರಾಜೇಂದ್ರ ಶ್ರೀಗಳಿಂದ 1958ರಲ್ಲಿ ಸ್ಥಾಪಿಸಲ್ಪಟ್ಟು, ತನ್ನದೆ ಬೆಳವಣಿಗೆ ಸಾಧಿಸಿದೆ. ರಂಗಭೂಮಿ ಪ್ರಪಂಚಕ್ಕೆ ಮೂರು ಸಾವಿರ ವರ್ಷಗಳ ಇತಿಹಾಸವಿದೆ. ರಂಗೋತ್ಸವ ಎಂದರೆ ವಿದ್ಯಾರ್ಥಿಗಳು ಮತ್ತು ಬೋಧಕರಿಗಾಗಿ ಅನುಭವದ ಜೊತೆಗೆ ಸಂತೋಷದಿಂದ ಕೂಡಿದ ಉತ್ತೇಜಿತ ಕಲಿಕೆಗಾಗಿ ಹಮ್ಮಿಕೊಂಡ ವೈವಿಧ್ಯಮಯ ಸಾಂಸ್ಕೃತಿಕ ಚಟುವಟಿಕೆಗಳಾಗಿವೆ. ರಂಗಭೂಮಿಯಿಂದ ಮಕ್ಕಳು ಪರಸ್ಪರ ಒಗ್ಗೂಡುವಿಕೆ, ಆತ್ಮವಿಶ್ವಾಸ, ಏಕಾಗ್ರತೆಯನ್ನು ಸಂಪಾದಿಸುವುದಕ್ಕೆ ಸಾಧ್ಯವಿದೆ. ನಾನು 1966–67ರಲ್ಲಿ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಕೆರೆಗೆ ಹಾರದಲ್ಲಿ ಅಭಿನಯಿಸಿ ಪ್ರಥಮ ಬಹುಮಾನ ಗಳಿಸಿದ್ದರ ಸವಿನೆನಪನ್ನು ಈ ರಂಗೋತ್ಸವ ಮೆಲುಕು ಹಾಕುವಂತೆ ಮಾಡಿದೆ ಎಂದು ಹೇಳಿದರು.

ಮೈಸೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಎಂ.ಡಿ. ಸುದರ್ಶನ್‌ರವರು ಇಂದಿನ ಆಧುನಿಕ ಶಿಕ್ಷಣ ಕ್ರಮದಲ್ಲಿ ರಂಗಶಿಕ್ಷಣ ಅವಶ್ಯಕವಾಗಿದೆ. ನಾನೂ ಕೂಡ ಪದವಿ ಹಂತದಲ್ಲಿ ಓದುತ್ತಿದ್ದಾಗಲೇ ರಂಗಶಿಕ್ಷಣ ತರಬೇತಿ

ಪಡೆದಿದ್ದೆ. ನಾಟಕ ಎಂಬುದು ವ್ಯಕ್ತಿ ಎನ್ನುವುದರ ಬದಲಿಗೆ ಸಮೂಹ ಎಂಬುದು ಪ್ರಧಾನ ದೃಷ್ಟಿಯಾಗಿರುತ್ತದೆ. ನಾಟಕ ಕಲೆಯಲ್ಲಿ ಅಭಿನಯಿಸುವಾಗ ಪರಸ್ಪರ ಭಾವನಾತ್ಮಕ ಪ್ರೀತಿ, ತಾಳ್ಮೆ, ಸಹಾನುಭೂತಿಯ ಗುಣಗಳೆಲ್ಲವೂ ಅನಾವರಣಗೊಳ್ಳುತ್ತವೆ. ವಿದ್ಯಾರ್ಥಿಗಳು ಸಮಾಜದ ಸರ್ವತೋಮುಖ ಪರಿವರ್ತನೆಗೆ ಶ್ರಮಿಸಿ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ಪೂರ್ಣಾನಂದ. ಶ್ರೀ ಬಿ. ನಿರಂಜನಮೂರ್ತಿ, ಪ್ರಾಂಶುಪಾಲರು, ಶೈಕ್ಷಣಿಕ ಡೀನ್, ಮಹಾವಿದ್ಯಾಪೀಠದ ಅಧಿಕಾರಿವೃಂದ, ವಿವಿಧ ಶಾಲೆಗಳ ಶಿಕ್ಷಕರು, ಅಧ್ಯಾಪಕರು, ಅಧ್ಯಾಪಕೇತರರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕು. ವಿದ್ಯಾ ಮತ್ತು ತಂಡದವರು ಪ್ರಾರ್ಥಿಸಿದರು. ಡಾ. ಚೈತ್ರ ಸ್ವಾಗತಿಸಿದರು. ಶ್ರೀ ಚಂದ್ರಶೇಖರಾಚಾರ್ ಹೆಗ್ಗೋತಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಎಂ.ಬಿ. ಲಲಿತಾಂಬ ವಂದಿಸಿದರು. ಶ್ರೀಮತಿ ಜೆ. ಪುಷ್ಪಲತಾ ನಿರೂಪಿಸಿದರು.

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕ್ಯಾಂಪಸ್ ಆಯ್ಕೆ ಪ್ರಕ್ರಿಯೆ

ಸ್ಪರ್ಧೆಗಳಾಗಲಿ, ಉದ್ಯೋಗಮೇಳಗಳಾಗಲಿ ವಿದ್ಯಾರ್ಥಿಗಳಿಗೆ ಮೊದಲು ತಮ್ಮ ಸಾಮರ್ಥ್ಯದ ಬಗ್ಗೆ ಅರಿವಿರಬೇಕು. ಪರೀಕ್ಷೆಗಳಿಗೆ ಅಥವಾ ಆಯ್ಕೆ ಪ್ರಕ್ರಿಯೆಗಳಿಗೆ ತಕ್ಕಂತೆ ಸಿದ್ಧತೆ ಮಾಡಿಕೊಳ್ಳಬೇಕು. ಯಶಸ್ಸಿನತ್ತ ದಾಪುಗಾಲು ಇಡಲು ಪೂರ್ವ ನಿಯೋಜಿತದಂತೆ ತಯಾರಿ ಹೊಂದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಕೆರಿಯರ್ಸ್ ಸ್ಪಾರ್ಕ್ ವ್ಯವಸ್ಥಾಪಕರಾದ ಶ್ರೀ ಎಸ್.ಎಂ. ಪ್ರಸಾದ್ ತಿಳಿಸಿದರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕೆರಿಯರ್ ಗೈಡೆನ್ಸ್ & ಪ್ಲೇಸ್‌ಮೆಂಟ್ ಸೆಲ್ ವತಿಯಿಂದ ಆಯೋಜಿಸಿದ್ದ ಕ್ಯಾಂಪಸ್ ಆಯ್ಕೆ ಪ್ರಕ್ರಿಯೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳು ತಮ್ಮ ಪದವಿ ಶಿಕ್ಷಣವನ್ನು ಮುಗಿಸಿ ಉದ್ಯೋಗ ಕ್ಷೇತ್ರಕ್ಕೆ ಕಾಲಿಟ್ಟಾಗ ನಾನಾ ರೀತಿಯ ಗೊಂದಲಗಳಿರುತ್ತವೆ. ಜೀವನದಲ್ಲಿ ಗುರಿ ಇಟ್ಟುಕೊಂಡರೆ ಈ ಗೊಂದಲಗಳಿಂದ ಮುಕ್ತರಾಗಿ ಉದ್ಯೋಗವನ್ನು ಪಡೆಯಬಹುದು. ಅದಕ್ಕಾಗಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗದುಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಸಾಮಾನ್ಯ ಜ್ಞಾನ ಮುಖ್ಯವಾಗಿರುತ್ತದೆ. ತಂತ್ರಜ್ಞಾನ ಮುಂದುವರಿಯುತ್ತಿರುವುದರಿಂದ ಒಳ್ಳೆಯ ಜ್ಞಾನ, ಉತ್ತಮ ಮಾತುಗಾರಿಕೆಯ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಒಳ್ಳೆಯ ಉದ್ಯೋಗ ಗಳಿಸಲು ಸಾಧ್ಯವಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಪ್ರಾಚಾರ್ಯರಾದ ಡಾ.ಎಂ ಪ್ರಭುರವರು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಉದ್ಯೋಗ ಮುಖ್ಯವಾಗುತ್ತದೆ. ಪದವಿ ನಂತರದಲ್ಲಿ ಏನು ಮಾಡಬೇಕು ಎಂಬ ಚಿಂತೆ ಬರುವುದು ಸಹಜವಾಗಿರುತ್ತದೆ. ತಯಾರಿಯನ್ನು ಮಾಡಿಕೊಂಡರೆ ಮುಂದೆ ಉದ್ಯೋಗವನ್ನು ಸುಲಭವಾಗಿ ಪಡೆಯಬಹುದು. ಉದ್ಯೋಗ ಪ್ರತಿಯೊಬ್ಬರ ಅವಶ್ಯಕತೆಯಾಗಿದೆ. ಜೀವನ ನಿರ್ವಹಣೆಗೆ ಆರ್ಥಿಕ ಸಂಪನ್ಮೂಲದ ಅವಶ್ಯಕತೆ ಇದ್ದು ಅದನ್ನು ಪೂರೈಸಿಕೊಳ್ಳಲು ಉದ್ಯೋಗದ ಅವಶ್ಯಕತೆ ಇರುತ್ತದೆ. ಹೆಣ್ಣು ಮಕ್ಕಳು ಶೋಷಣೆಯಿಂದ ಹೊರ ಬರಲು ಆರ್ಥಿಕ ಸ್ವಾವಲಂಬನೆ ಮುಖ್ಯವಾಗಿದ್ದು, ಅದಕ್ಕೆ ಉದ್ಯೋಗದ ಅವಕಾಶಗಳನ್ನು ಹುಡುಕಿ ಮಾಹಿತಿಯನ್ನು ತಿಳಿದು ಮುಂದುವರಿಯಬೇಕು ಎಂದು ವಿದ್ಯಾರ್ಥಿನಿಯರಿಗೆ ಸಲಹೆ ನೀಡಿದರು.

ವೇದಿಕೆಯಲ್ಲಿ ಶ್ರೀಮತಿ ಎಸ್. ಮಮತ, ಶ್ರೀಮತಿ ಆರ್. ಭವ್ಯ, ಮತ್ತು ಶ್ರೀ ಗಿರೀಶ್ ಉಪಸ್ಥಿತರಿದ್ದರು.

# ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ 68ನೇ ಕನ್ನಡ ರಾಜ್ಯೋತ್ಸವ

### ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಮಾಲೂರು



ಮಾಲೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ದಿನಾಂಕ 1.11.2023ರಂದು 68ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಾಹಿತಿಗಳಾದ ಶ್ರೀ ಸ. ರಘುನಾಥ್‌ರವರು ಕುವೆಂಪುರವರು ರಚಿಸಿರುವ ನಾಡಗೀತೆಯು ಅರ್ಥ ಸ್ವಾರಸ್ಯವನ್ನು ಹೊಂದಿದೆ. ಕನ್ನಡವು ಪ್ರಾಚೀನವಾದುದು. ವಚನ ಸಾಹಿತ್ಯ, ದಾಸಸಾಹಿತ್ಯ ಸೊಬಗಿನಿಂದ ಕೂಡಿದೆ. ಮಾತೃಭಾಷೆಯನ್ನು ಸಮರ್ಪಕವಾಗಿ ಬಳಸೋಣ. ಕನ್ನಡ ಕೇವಲ ಭಾಷೆಯಲ್ಲ, ಅದು ಸಂಸ್ಕೃತಿ, ಬದುಕು ಮತ್ತು ಜೀವನಶೈಲಿಯಾಗಿದೆ. ಆದ್ದರಿಂದ ಎಲ್ಲರೂ ಕನ್ನಡವನ್ನು ಪ್ರೀತಿಸಿ ದೈನಂದಿನ ವ್ಯವಹಾರಗಳಲ್ಲಿ ಬಳಸಿ ಎಂದು ಹೇಳಿದರು.

ಸಂಯೋಜನಾಧಿಕಾರಿಗಳಾದ ಶ್ರೀ ಎಸ್.ಹೆಚ್. ಮಹೇಶ್ವರಪ್ಪರವರು ಕನ್ನಡ ಭಾಷೆ ನಮ್ಮ ಉಸಿರಾಗಿ ಬದುಕನ್ನು ರೂಪಿಸಿದೆ. ಇದನ್ನು ಪ್ರೀತಿಸಿ ಗೌರವಿಸಬೇಕಾದ ಹೊಣೆಗಾರಿಕೆ ನಮ್ಮ ಮೇಲಿದೆ. ಕನ್ನಡ ಭಾಷೆಯ ಮೇಲೆ ಆಂಗ್ಲಭಾಷೆಯ ಪ್ರಭಾವ ಹೆಚ್ಚಾಗಿ ಕನ್ನಡ ಭಾಷೆಯ ಬಳಕೆಯು ಮಸುಕಾಗುತ್ತಿದೆ. ಹಾಗಾಗಿ ನಾವೆಲ್ಲರೂ ಕನ್ನಡ ಭಾಷೆಯನ್ನು ಬಳಸಿ ಉಳಿಸೋಣ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಮಟ್ಟದ ಪದವಿಪೂರ್ವ ಕಾಲೇಜು ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತರಾದ ಜೆಎಸ್‌ಎಸ್ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಶ್ರೀ ಜಿ. ಮಂಜುನಾಥರವರು ಸ್ವಾಗತಿಸಿದರು. ಶ್ರೀ ಬಿ. ಆನಂದ್ ವಂದಿಸಿದರು. ಶ್ರೀ ವಿ. ಮಹದೇವಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.

ಅಕ್ಕ ಕೇಳೌ ! ನಾನೊಂದು ಕನಸ ಕಂಡೆ
ಅಕ್ಕಿ ಅಡಕೆ ಓಲೆ ತೆಂಗಿನಕಾಯ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವಾ
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು
ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು

**–ಅಕ್ಕಮಹಾದೇವಿ**

## ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಸರಸ್ವತಿಪುರಂ, ಮೈಸೂರು



ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ ದಿನಾಂಕ 1.11.2023ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಕನ್ನಡ ವಿಭಾಗದ ಉಪನ್ಯಾಸಕರಾದ ಡಾ. ಡಿ.ಎಂ. ಮಹೇಂದ್ರಮೂರ್ತಿರವರು ಮಾತನಾಡುತ್ತಾ ಕನ್ನಡ ನಾಡು ನುಡಿಯನ್ನು ಉಳಿಸುವ ದೆಸೆಯಲ್ಲಿ ಸಮಸ್ತ ಕನ್ನಡಿಗರೂ ಪಣತೊಡಬೇಕಾಗಿದೆ. ಕನ್ನಡವು ಅನ್ನದ ಭಾಷೆಯಾಗಬೇಕಿದೆ. ಕನ್ನಡನಾಡಿನಲ್ಲಿ ಕನ್ನಡಿಗರು ಪರದೇಶಿಗಳಾಗಬಾರದು. ಕನ್ನಡ ನೆಲಜಲದ ಪ್ರಶ್ನೆ ಬಂದಾಗ ಒಗ್ಗಟ್ಟು ಪ್ರದರ್ಶಿಸಬೇಕಿದೆ. ಕನ್ನಡದ ನಡೆ ಸಮಸ್ಯೆ ನಿವಾರಣೆಯಾಗಬೇಕಿದೆ. ಕನ್ನಡ ರಾಜ್ಯೋತ್ಸವ ಹಬ್ಬದಂತೆ ಆಚರಣೆಯಾಗಬೇಕು. ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಸುದೀರ್ಘ, ಶ್ರೀಮಂತ ಪರಂಪರೆಯಿದೆ. ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ತಂದುಕೊಟ್ಟ ಮಹಾನ್ ಸಾಹಿತಿಗಳಿದ್ದಾರೆ. ಕನ್ನಡ, ಕರ್ನಾಟಕವನ್ನು ಕಟ್ಟಿದ ಮಹನೀಯರನ್ನು ಸ್ಮರಿಸುವ ಕೆಲಸ ಈ ರಾಜೋತ್ಸವದಂದು ಆಗಬೇಕಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿನಿಯರು, ಅಧ್ಯಾಪಕರು ಹಾಗೂ ಕಛೇರಿ ಸಿಬ್ಬಂದಿಯವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಡಾ. ಎಸ್. ರಾಧಾಕೃಷ್ಣನ್ ನಗರ, ಮೈಸೂರು

ಮೈಸೂರಿನ ಡಾ. ಎಸ್. ರಾಧಾಕೃಷ್ಣನ್ ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ದಿನಾಂಕ 1.11.2023ರಂದು 68ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಕನ್ನಡ ಶಿಕ್ಷಕರಾದ ಶ್ರೀ ರಮೇಶ್ ನಾಡು ನುಡಿ, ನೆಲ–ಜಲ, ಭಾಷೆಯ ಬಗ್ಗೆ ತಿಳಿಸಿದರು. 8ನೇ ತರಗತಿಯ ವಿದ್ಯಾರ್ಥಿನಿಯರು ಸಮೂಹಗಾಯನವನ್ನು ನಡೆಸಿಕೊಟ್ಟರು. ಶ್ರೀ ನವೀನ್ ಕಾರ್ಯಕ್ರಮ ನಿರೂಪಿಸಿದರು. ಕು. ಲಾಸ್ಯ ಪ್ರಾರ್ಥಿಸಿದರು. ಪ್ರಾಂಶುಪಾಲರು ಹಾಗು ಬೋಧಕ ಮತ್ತು ಬೋಧಕೇತರ ವರ್ಗದವರು ಕನ್ನಡಾಂಬೆಯ ಭಾವಚಿತ್ರಕ್ಕೆ ಪುಷ್ಪನಮನವನ್ನು ಸಲ್ಲಿಸಿದರು. ಕು. ಹರ್ಷಿಕ ಕಿರು ಭಾಷಣ ಮಾಡಿದರು. ಶ್ರೀ ಸತ್ಯನಾರಾಯಣ ವಂದಿಸಿದರು.

## ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆ, ಮೇಟಗಳ್ಳಿ, ಮೈಸೂರು



ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ದಿನಾಂಕ 1.11.2023 ರಂದು 68ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು.

ಮುಖ್ಯೋಪಾಧ್ಯಾಯರಾದ ಶ್ರೀ ಎನ್.ಪಿ. ಸತೀಶ್‌ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಭಾವನೆಗಳನ್ನು ಒಬ್ಬರಿಂದ ಒಬ್ಬರಿಗೆ ಕನ್ನಡ ಭಾಷೆಯಲ್ಲಿ ತಿಳಿಸುವುದು ಸುಲಭ ಸಾಧ್ಯವಾಗಿದೆ ಎಂದು ತಿಳಿಸಿದರು.

ಶ್ರೀಮತಿ ಎಂ.ಸಿ. ಶಾಂತಿ ಕನ್ನಡ ಭಾಷೆಯ ಹಿರಿಮೆ ಹಾಗೂ ವಿಶೇಷತೆ ಕುರಿತು, ಶ್ರೀಮತಿ ಎಂ.ವಿ. ಅಮೃತವಾಣಿ ಕನ್ನಡ ನಾಡಿನ ಉಗಮ, ಹಿರಿಮೆ ಕುರಿತು ಶ್ರೀ ಎನ್.ಎಸ್. ನಟೇಶ ಕನ್ನಡ ಬಾವುಟ, ಸಂವಿಧಾನದಲ್ಲಿ ಕನ್ನಡ ಭಾಷೆಗೆ ಇರುವ ಪ್ರಾಶಸ್ತ್ಯದ ಬಗ್ಗೆ, ಶ್ರೀಮತಿ ಪಿ. ಮಹದೇವಮ್ಮ ಕರ್ನಾಟಕದ ಏಕೀಕರಣದ ಬಗ್ಗೆ ತಿಳಿಸಿದರು.

ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ಅಭಿಯಾನದ ಅಂಗವಾಗಿ 5 ಗೀತೆಗಳನ್ನು ಸಂಗೀತ ಶಿಕ್ಷಕಿಯಾದ ಶ್ರೀಮತಿ ಸುಮಂಗಲ ಜಂಗಮಶೆಟ್ಟಿಯವರ ಸಾರಥ್ಯದಲ್ಲಿ ಹಾಡುವುದರ ಮೂಲಕ ಗೀತ ನಮನವನ್ನು ಸಲ್ಲಿಸಲಾಯಿತು.

ಕು. ಪ್ರತೀಕ್ಷ ಪ್ರಾರ್ಥಿಸಿದರು. ಶ್ರೀ ಪಿ. ರಾಜಶೇಖರಮೂರ್ತಿ ಸ್ವಾಗತಿಸಿದರು. ಶ್ರೀ ಜಿ. ಶಿವಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಬಿ.ಎಂ. ಮಂಜುಳ ವಂದಿಸಿದರು. ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಸುತ್ತೂರು ಶ್ರೀಮಠದಲ್ಲಿ ಜರುಗಿದ 115ನೇ ಮಾಸಿಕ ಸಾಮೂಹಿಕ ವಿವಾಹದಲ್ಲಿ ಮೂರು ಜೋಡಿಗಳು ಸತಿಪತಿಗಳಾದರು. ಚಿತ್ರದಲ್ಲಿ ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್ ಹಾಗೂ ಇತರರನ್ನು ಕಾಣಬಹುದು.

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯ, ಮೈಸೂರು




ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ದಿನಾಂಕ 4.11.2023ರಂದು 68ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಪ್ರಾಂಶುಪಾಲರಾದ ಶ್ರೀಮತಿ ಕೆ.ಬಿ. ಸುಮರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಕನ್ನಡ ನಾಡು ಶಿಲ್ಪಕಲೆಯ ತವರೂರು, ಸಾಂಸ್ಕೃತಿಕವಾಗಿ, ಹೆಮ್ಮರವಾಗಿ ಬೆಳೆದ ಜ್ಞಾನದ ಬೀಡು. ಕನ್ನಡದ ಕವಿಗಳು ತಮ್ಮ ಬರವಣಿಗೆಯಿಂದ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ವಿದ್ಯಾರ್ಥಿಗಳು ಕನ್ನಡದ ಕಥೆ, ಕಾದಂಬರಿ, ನಾಟಕಗಳನ್ನು ಓದಿ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂದರು.

ಶ್ರೀ ತೋಂಟದಾರ್ಯರವರು ಕನ್ನಡ ಭಾಷೆ ಕೇವಲ ಭಾಷೆಯಲ್ಲ. ಇದು ಒಂದು ಸಂಸ್ಕೃತಿ, ಜ್ಞಾನಕ್ಕೆ, ಭಾವಕ್ಕೆ ಹತ್ತಿರವಾದ ಶ್ರೀಮಂತ ಭಾಷೆ ಎಂದು ತಿಳಿಸಿದರು.

ಶ್ರೀಮತಿ ರೂಪ ಮತ್ತು ವಿದ್ಯಾರ್ಥಿಗಳು ಪ್ರಾರ್ಥನೆ ಮಾಡಿದರು. ಶ್ರೀಮತಿ ಸುಮಿತ್ರರವರು ಸ್ವಾಗತಿಸಿದರು. ಶ್ರೀಮತಿ ಸತ್ಯಭಾಮರವರು ವಂದಿಸಿದರು. ಶ್ರೀಮತಿ ಶೋಭಾ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಹೂವಿನ ಹಡಗಲಿ




ಹೂವಿನ ಹಡಗಲಿಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ದಿನಾಂಕ 1.11.2023ರಂದು 68ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ನಿವೃತ್ತ ಪ್ರಾಂಶುಪಾಲರಾದ ಪ್ರೊ. ಶಾಂತಮೂರ್ತಿ ಬಿ. ಕುಲಕರ್ಣಿಯವರು ಧ್ವಜಾರೋಹಣ

ನೆರವೇರಿಸಿ ಕರ್ನಾಟಕ ಏಕೀಕರಣವು ಹಲವಾರು ಮಹನೀಯರ ತ್ಯಾಗ ಬಲಿದಾನಗಳ ಪ್ರತೀಕವಾಗಿದೆ. ಕನ್ನಡ ಮನದ ಭಾಷೆಯಾಗಬೇಕು ಎಂದು ನುಡಿದರು.

ಪ್ರಾಂಶುಪಾಲರಾದ ಶ್ರೀ ಎನ್. ಗುರುಸ್ವಾಮಿ ಕನ್ನಡ ಭಾಷೆ ಸತ್ವಪೂರ್ಣವಾಗಬೇಕಾದರೆ ಅದನ್ನಾಡುವ ಕನ್ನಡಿಗರು ಭಾಷಾಭಿಮಾನಿಗಳಾಬೇಕು ಎಂದು ಹೇಳಿದರು. ಬಿಎಡ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಪಿ. ರಮೇಶ್ ಉಪಸ್ಥಿತರಿದ್ದರು. ಜೆಎಸ್‌ಎಸ್ ಪಬ್ಲಿಕ್ ಶಾಲೆ, ಬಿಎಡ್ ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿವೃಂದ, ಬಿಎಡ್ ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಕು. ಟಿ. ಕಾವ್ಯ ವಂದಿಸಿದರು. ಶ್ರೀ ಮಂಜುನಾಥ ಎಂ. ಹಿರೇಮಠ ನಿರೂಪಿಸಿದರು.

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಬಾಗೆ




ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ದಿನಾಂಕ 18.11.2023 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಹಾಸನದ ಎವಿಕೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸೀ.ಚ. ಯತೀಶ್ವರರವರು ಮಾತನಾಡಿ ಕನ್ನಡ ಭಾಷೆಯು 2000 ವರ್ಷಗಳ ಇತಿಹಾಸವನ್ನು ಒಳಗೊಂಡು ಸಮೃದ್ಧವಾಗಿದೆ. ಅಂತಹ ಒಂದು ಭಾಷೆಯು ಇಂದು ಅವನತಿಯ ಕಡೆಗೆ ಸಾಗುತ್ತಿದೆ. ಅನ್ಯದೇಶದವರು ನಮ್ಮ ನಾಡಿಗೆ ಬಂದು ಕನ್ನಡವನ್ನು ಕಲಿತು ಬೆಳೆಸುವ ಉದಾಹರಣೆಗಳು ಸಾಕಷ್ಟಿವೆ. ಆದರೆ ಕನ್ನಡಿಗರದ ನಾವು ನಮ್ಮ ತನವನ್ನು ಮರೆತು ಭಾಷೆಯ ಅಭಿಮಾನವನ್ನು ಕಳೆದುಕೊಳ್ಳುವುದು ಸರಿಯಲ್ಲ. ಪಂಪನಾದಿಯಾಗಿ ಹಲವು ಕವಿಪುಂಗವರು, ವಚನಕಾರರು, ದಾಸರು, ಸಂತರು, ಸಮಾಜೋದ್ಧಾರಕರು, ನಾಡಿನ ಅಭಿಮಾನಿಗಳು ನಾಡು ನುಡಿಗೆ ಕಾಣಿಕೆಯನ್ನು ನೀಡುವ ಮುಖೇನ ಭಾಷೆಯನ್ನು ಉಳಿಸಿ ಬೆಳೆಸಿರುವುದನ್ನು ಕಾಣಬಹುದು. ಪ್ರಪಂಚದಲ್ಲೇ ಸರಳವಾದ, ಸುಂದರವಾದ ವರ್ಣಮಾಲೆಯ ರಚನೆಯನ್ನು ಒಳಗೊಂಡ ಭಾಷೆ ನಮ್ಮದು. ಭವಿಷ್ಯದ ಕನ್ನಡ ರಥವನ್ನು ಎಳೆಯುವ ಮೂಲಕ ಭಾಷೆಯನ್ನು ಉಳಿಸಿ ಬೆಳೆಸಿ ಎಂದು ಹೇಳಿದರು.

ಪ್ರಾಂಶುಪಾಲರಾದ ಶ್ರೀ ಬಿ. ಮಧುಕುಮಾರ್ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿನಿ ಕು. ಪಂಚಮಿ ಕನ್ನಡ ಭಾಷೆಯ ಇತಿಹಾಸವನ್ನು ತಿಳಿಸಿದಳು. ಕು. ಸಾನಿಯಾ ಮೇರಿಯಾ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಕು. ನೂತನ್ಯ ಸ್ವಾಗತಿಸಿದರು. ಕು. ಝೇಂಕಾರ್ ವಂದಿಸಿದನು. ಕು. ಸುಜನ್ ಶೆಟ್ಟಿ ಕಾರ್ಯಕ್ರಮವನ್ನು ನಿರೂಪಿಸಿದರು.

## ಜೆಎಸ್ಎಸ್ ಸಂಸ್ಥೆಗಳು, ಸುತ್ತೂರು



ಸುತ್ತೂರು ಜೆಎಸ್ಎಸ್ ಸಂಸ್ಥೆಗಳಲ್ಲಿ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು. ಚಿತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಹಿರಿಯ ಲೇಖಕರು ಹಾಗೂ ಸಂದರ್ಶಕ ಪ್ರಾಧ್ಯಾಪಕರಾದ ಶ್ರೀ ಸಿ. ನಾಗಣ್ಣರವರು, ಜೆಎಸ್ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಆರ್. ಮೂಗೇಶಪ್ಪರವರು ಹಾಗೂ ಸುತ್ತೂರು ಸಂಸ್ಥೆಗಳ ಮುಖ್ಯಸ್ಥರುಗಳಿದ್ದಾರೆ.

ಸುತ್ತೂರು ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ದಿನಾಂಕ 18.11.2023ರಂದು ಮಕ್ಕಳ ದಿನಾಚರಣೆ ಮತ್ತು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಹಿರಿಯ ಲೇಖಕರು, ಸಂದರ್ಶಕ ಪ್ರಾಧ್ಯಾಪಕರು ಹಾಗೂ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಡಾ. ಸಿ. ನಾಗಣ್ಣರವರು ಮಾತನಾಡಿ, ಕನ್ನಡ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ ವಿಶಿಷ್ಟವಾಗಿದೆ ಎಂದು ಸರ್ದಾರ್ ವಲ್ಲಭಬಾಯಿ ಪಟೇಲ್‌ರವರು ಬಣ್ಣಿಸಿದ್ದಾರೆ. ಕರ್ನಾಟಕವು ಸುದೀರ್ಘವಾದ ಪರಂಪರೆಯನ್ನು, ಸಂಸ್ಕೃತಿಯನ್ನು ಹೊಂದಿದೆ. ಕನ್ನಡಿಗರು ಒಳ್ಳೆ ಬಲ್ಮೆ ಮತ್ತು ಜಾಣ್ಮೆಗೆ ಹೆಸರಾದವರು ಎಂದರು.

ಚಾಚಾ ನೆಹರುರವರು ಮಕ್ಕಳ ಮೇಲೆ ಇಟ್ಟಿದ್ದ ಮಮಕಾರ ಅಪಾರ. ಸುತ್ತೂರು ಶ್ರೀಮಠವು ಲಕ್ಷಾಂತರ ವಿದ್ಯಾರ್ಥಿಗಳಿಗೆ ತ್ರಿವಿಧ ದಾಸೋಹ ನೀಡಿ, ಪ್ರತಿಯೊಂದು ಮಗುವಿನ ಶೈಕ್ಷಣಿಕ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಮುಖ್ಯ ಅತಿಥಿಗಳಾದ ಜೆಎಸ್ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಆರ್. ಮೂಗೇಶಪ್ಪರವರು ಮಾತನಾಡಿ, ಇಂದಿನ ಮಕ್ಕಳಲ್ಲಿ ಎಂಥ ಶಕ್ತಿ ಇದೆ ಎಂಬುದು ತಿಳಿದಿರುವುದಿಲ್ಲ, ಅವರಿಗೆ ಸೂಕ್ತವಾದ ಮಾರ್ಗದರ್ಶನ ಮಾಡಿದರೆ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ. ಅಂತಹ ಮಾರ್ಗದರ್ಶಕರನ್ನು ಸುತ್ತೂರು ಜೆಎಸ್ಎಸ್ ಸಂಸ್ಥೆಯು ಹೊಂದಿದೆ. ಎಲ್ಲಾ ರೀತಿಯ ಸೌಲಭ್ಯಗಳಿಂದ ವಂಚಿತರಾದ ಮಕ್ಕಳಿಗೆ ಸುತ್ತೂರು ಶ್ರೀಮಠವು ನೆರವು ನೀಡುತ್ತಿದೆ, ಶಿಕ್ಷಣದ ಜೊತೆಗೆ ಯೋಗ, ಸಂಗೀತ, ಮಲ್ಲಕಂಬ ಮತ್ತು ಕ್ರೀಡೆಗಳಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಭಾಗವಹಿಸುತ್ತಿರುವುದು ಹೆಮ್ಮೆಯ ವಿಷಯ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ಕಲಿಯೋಕೆ ಕೋಟಿ ಭಾಷೆ ಇದ್ದರು ಆಡೋಕೆ ಒಂದೇ ಭಾಷೆ, ಅದು ಕನ್ನಡ. ಜೀವನಕ್ಕಾಗಿ ನೂರು ಭಾಷೆ ಕಲಿತರು, ಹೃದಯದ ಭಾಷೆ ಕನ್ನಡವೇ ಆಗಿರಲಿ. ಕನ್ನಡಿಗರು ಕನ್ನಡವನ್ನು ಉಳಿಸಿ ಬೆಳೆಸಿ ಮತ್ತು ಕಲಿಸಬೇಕು. ಇಲ್ಲಿನ ವಿದ್ಯಾರ್ಥಿಗಳು ಉತ್ತಮ ಶಿಕ್ಷಣದ

ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸುತ್ತಿರುವುದು ಶ್ಲಾಘನೀಯ. ದೂರದ ಮೇಘಾಲಯ, ಮಣಿಪುರ, ಜಾರ್ಖಾಂಡ್, ಬಿಹಾರದ ಮಕ್ಕಳು ಕನ್ನಡ ಭಾಷೆ, ಸಂಸ್ಕೃತಿಯನ್ನು ಕಲಿತು ನೆಮ್ಮದಿಯಿಂದ ವ್ಯಾಸಂಗ ಮಾಡುತ್ತಿರುವುದು ಹೆಮ್ಮೆಯನ್ನುಂಟು ಮಾಡುವ ವಿಚಾರ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯಸ್ಥರುಗಳಾದ ಶ್ರೀ ಸಂಪತ್ತು, ಶ್ರೀ ವೀರಭದ್ರಯ್ಯ, ಡಾ. ಹೆಚ್.ಎಂ. ಮಹೇಶ್, ಶ್ರೀ ಎಸ್. ಶಿವಸ್ವಾಮಿ, ಶ್ರೀ ಜಿ. ಶಿವಮಲ್ಲು. ಶ್ರೀ ಎಂ.ಜಿ. ಬಸವಣ್ಣ, ಶ್ರೀ ಜಿ.ಎಂ. ಷಡಕ್ಷರಿ, ಶ್ರೀಮತಿ ಪಿ. ಸುಶೀಲ ಹಾಗೂ ಶ್ರೀ ಮಹದೇವಪ್ರಸಾದ್ ಉಪಸ್ಥಿತರಿದ್ದರು.

ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀಮತಿ ಎಸ್. ಸಿ. ಯಮುನಾರವರು ಸ್ವಾಗತಿಸಿದರು. ಶ್ರೀಮತಿ ಎಸ್. ಹೇಮಲತಾ ವಂದಿಸಿದರು. ಶ್ರೀಮತಿ ಜಿ. ನಂದಿನಿ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಬಡಾವಣೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಅಂಗವಾಗಿ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಪ್ರಸೂತಿ ತಂತ್ರ ಮತ್ತು ಸ್ತ್ರೀರೋಗ ವಿಭಾಗದ ವತಿಯಿಂದ ಸ್ತ್ರೀ ಸಂಬಂಧಿ ಖಾಯಿಲೆಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಎರಡನೇ ಹಂತದ ಜೆಎಸ್‌ಎಸ್ ಬಡಾವಣೆಯ ಲಲಿತಾದ್ರಿ ಮಹಿಳಾ ವೇದಿಕೆಯ ಸಹಭಾಗಿತ್ವದೊಂದಿಗೆ ದಿನಾಂಕ 6.11.2023 ರಂದು ಹಮ್ಮಿಕೊಳ್ಳಲಾಗಿತ್ತು.

ಪ್ರಾಂಶುಪಾಲರಾದ ಡಾ. ಸರ್ಬೇಶ್ವರ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಲಲಿತಾದ್ರಿ ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಜ್ಯೋತಿ ಓಂಪ್ರಕಾಶ್ ಮತ್ತು ಪ್ರಸೂತಿ ತಂತ್ರ ಮತ್ತು ಸ್ತ್ರೀರೋಗ ವಿಭಾಗದ ವೈದ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಈ ಶಿಬಿರದಲ್ಲಿ ಝಂಡು ಫಾರ್ಮಸಿ ವತಿಯಿಂದ ಉಚಿತ ಔಷಧಿಗಳ ವಿತರಣೆ, ಮೂಳೆ ಸಾಂದ್ರತಾ ಪರೀಕ್ಷೆ ಹಾಗೂ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ವತಿಯಿಂದ ಉಚಿತ ಮಧುಮೇಹ ತಪಾಸಣೆಯನ್ನು ಆಯೋಜಿಸಲಾಗಿತ್ತು. 125 ಮಂದಿ ಶಿಬಿರದ ಪ್ರಯೋಜನ ಪಡೆದರು. ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಪ್ರಸೂತಿತಂತ್ರ ಮತ್ತು ಸ್ತ್ರೀರೋಗ ವಿಭಾಗದ ವೈದ್ಯರುಗಳು, ಸ್ನಾತಕೋತ್ತರ ವಿದ್ಯಾರ್ಥಿಗಳು, ಕಲಿಕಾ ವೈದ್ಯರು ಪಾಲ್ಗೊಂಡಿದ್ದರು.

## ಆಚಾರಯ್ಯನ ಹುಂಡಿ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಅಂಗವಾಗಿ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಶಾಲಾಕ್ಯತಂತ್ರ ಸ್ನಾತಕೋತ್ತರ ವಿಭಾಗದ ವತಿಯಿಂದ ದಿನಾಂಕ 4.11.2023ರಂದು ಟಿ. ನರಸೀಪುರ ತಾಲ್ಲೂಕು ಆಚಾರಯ್ಯನ ಹುಂಡಿ ಗ್ರಾಮದಲ್ಲಿ ಉಚಿತ ಕಣ್ಣು, ಕಿವಿ, ಮೂಗು, ಗಂಟಲು ತಪಾಸಣಾ ಹಾಗೂ ಔಷಧಿ ವಿತರಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಶಿಬಿರದಲ್ಲಿ 110ಕ್ಕೂ ಹೆಚ್ಚು ಮಂದಿಗೆ ತಪಾಸಣೆ ಮಾಡಿ ಉಚಿತ ಔಷಧಗಳನ್ನು ವಿತರಿಸಲಾಯಿತು. ಹೆಚ್ಚು ಪ್ರಮಾಣದಲ್ಲಿ ಮೈಗ್ರೇನ್, ನೆಗಡಿ, ಕೆಮ್ಮು, ಕಣ್ಣಿನ ಅಲರ್ಜಿ ಹಾಗೂ ಗಂಟಲು ನೋವಿನ ಸಮಸ್ಯೆಗಳು ಕಂಡುಬಂದಿದ್ದು, ಹೆಚ್ಚಿನ ಚಿಕಿತ್ಸೆಗಳ ಬಗ್ಗೆ ಮಾಹಿತಿ ನೀಡಲಾಯಿತು. ಡಾ. ಶಿವಾನಂದ ಗವಿಮಠ, ಡಾ. ಡಿ. ಸಂಧ್ಯಾರಾಣಿ, ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಕಲಿಕಾ ವೈದ್ಯರುಗಳು ಭಾಗವಹಿಸಿದ್ದರು.

## ಸಾಂಸ್ಕೃತಿಕ ವೇದಿಕೆ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭ

ನಂಜನಗೂಡಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 16.11.2023ರಂದು 2023–24ನೇ ಸಾಲಿನ ಸಾಂಸ್ಕೃತಿಕ ವೇದಿಕೆ ಮತ್ತು ಕ್ರೀಡಾ ಚಟುವಟಿಕೆಗಳನ್ನು ಉದ್ಘಾಟಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕೃಷ್ಣರಾಜನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಪ್ರೊ. ವೈ.ಸೂರು ಕೃಷ್ಣಮೂರ್ತಿರವರು ಪ್ರಸ್ತುತ ಸ್ಪರ್ಧಾತ್ಮಕ ಹಾಗೂ ವಿಜ್ಞಾನ ಯುಗದಲ್ಲಿ ಸಂಸ್ಕೃತಿ ಹಾಗೂ ಶಿಷ್ಟಾಚಾರ ಆಧಾರಿತ ಶಿಕ್ಷಣದ ವ್ಯವಸ್ಥೆ ಅತ್ಯವಶ್ಯಕವಾಗಿದ್ದು, ಈ ನಿಟ್ಟಿನಲ್ಲಿ ಪ್ರತಿಷ್ಠಿತ ಜೆಎಸ್‌ಎಸ್ ಕಾಲೇಜು ಸುತ್ತೂರು ಶ್ರೀಮಠದ ಗುರು ಪರಂಪರೆಯ ಆಶಯದಂತೆ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯವಾದ ವಿಚಾರವಾಗಿದೆ. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡು ಸಾಹಿತ್ಯ, ಸಂಸ್ಕೃತಿ ಹಾಗೂ ಸಂಸ್ಕಾರ ಪರವಾದ ಬದುಕನ್ನು ರೂಢಿಸಿಕೊಳ್ಳಬೇಕು. ಕಲೆಯಲ್ಲಿ ಶ್ರೇಷ್ಠತೆಯನ್ನು ಮೆರೆದು ಸಮಾಜಕ್ಕೆ ಮಾದರಿ ಕಲಾವಿದರಾಗಿದ್ದ ಡಾ. ರಾಜಕುಮಾರ್, ಸಮಾಜಕ್ಕೆ ಶ್ರೇಷ್ಠ ಚಿತ್ರಗಳನ್ನು ನಿರ್ದೇಶಿಸಿ, ಪರಿಚಯಿಸಿದ ಪುಟ್ಟಣ್ಣ ಕಣಗಾಲ್

ಹಾಗೂ ಇಡೀ ಸಾಹಿತ್ಯ ಬದುಕಿನ ನಿಜವಾದ ಕನ್ನಡಿ ಎಂದು ಸಾಬೀತುಪಡಿಸಿದ ರಾಷ್ಟ್ರಕವಿ ಕುವೆಂಪು ಮುಂತಾದ ಶ್ರೇಷ್ಠ ದಿಗ್ಗಜರುಗಳನ್ನು ನೆನಪಿಸಿಕೊಳ್ಳಬೇಕು. ಪ್ರಸ್ತುತ ಸಂದರ್ಭದಲ್ಲಿ ವಚನಗಳು ಹಾಗೂ ಆಧ್ಯಾತ್ಮಿಕ ಶಕ್ತಿ ಆಧಾರಿತ ಜನಪದ ಗೀತೆಗಳು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಹಕಾರಿಯಾಗುತ್ತವೆ ಎಂದು ಹೇಳಿದರು.

ಬಸವಣ್ಣನವರ ಎನ್ನ ಕಾಯವ ದಂಡಿಗೆಯ ಮಾಡಯ್ಯ ವಚನವನ್ನು ಹಾಗೂ ಮಲೈ ಮಹದೇಶ್ವರನ್ನು ಕುರಿತಾದ ಸೋಲಿಸ ಬೇಡ ಗೆಲ್ಲಿಸಯ್ಯ ಎಂಬ ಭಕ್ತಿ ಪ್ರಧಾನ ಹಾಡುಗಳನ್ನು ಹಾಡಿ ವಿದ್ಯಾರ್ಥಿಗಳನ್ನು ರಂಜಿಸಿದರು.

ಮೈಸೂರಿನ ಓಂ ಕಾರ್ಮೆಲ್ ಸೋಮಾನಿ ಕಾಲೇಜಿನ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎನ್.ಎಸ್. ಸುಬ್ರಮಣ್ಯ ರವರು ಸಾಂಸ್ಕೃತಿಕ ಚಟುವಟಿಕೆಗಳಂತೆ ಕ್ರೀಡಾ ಚಟುವಟಿಕೆಗಳು ತುಂಬಾ ಅತ್ಯವಶ್ಯಕವಾಗಿದ್ದು ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಹಕಾರಿಯಾಗಿದೆ. ಕಾಲೇಜಿನ ಹಿರಿಯ ವಿದ್ಯಾರ್ಥಿಯಾಗಿ ಕ್ರೀಡಾ ವಿಭಾಗದಲ್ಲಿ ನಾನು ವಿದ್ಯಾಭ್ಯಾಸ ಮಾಡಿದ ಶಿಕ್ಷಣ ಸಂಸ್ಥೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿರುವುದು ಅತ್ಯಂತ ಹೆಮ್ಮೆ ಪಡುವ ವಿಷಯ ಎಂದು ಹೇಳಿದರು.

ಪ್ರಥಮ ದರ್ಜೆ ಗುತ್ತಿಗೆದಾರರಾದ ಶ್ರೀ ಯು.ಎನ್ ಪದ್ಮನಾಭರಾವ್‌ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲರಾದ ಡಾ. ಸಿ.ಎಸ್. ಹೊನ್ನೇಗೌಡ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೆ.ಎನ್. ಶಿವಕುಮಾರ್, ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಡಾ. ಎ. ಗಾಯತ್ರಿ ಹಾಗೂ ಕ್ರೀಡಾ ವೇದಿಕೆಯ ಸಂಚಾಲಕರು ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಪಿ.ಎಂ. ವಿಕ್ರಂ ಉಪಸ್ಥಿತರಿದ್ದರು. ಕು. ಡಿ. ನಮಿತ ಪ್ರಾರ್ಥಿಸಿದರು. ಕು. ಕುಸುಮಾಂಜಲಿ ಸ್ವಾಗತಿಸಿದರು. ಚಿ. ಜಶ್ವಂತ್ ನಾಯಕ್ ವಂದಿಸಿದರು ಹಾಗೂ ಕು. ರಂಜಿತ ಕಾರ್ಯಕ್ರಮ ನಿರೂಪಣೆ ಮಾಡಿದರು.



ಆರ್ಟ್ ಆಫ್ ಲಿವಿಂಗ್‌ನ 15 ವಿವಿಧ ದೇಶಗಳ ಭಕ್ತರು ಶ್ರೀ ಸುತ್ತೂರು ಕ್ಷೇತ್ರಕ್ಕೆ ಭೇಟಿ ನೀಡಿ ಕ್ಷೇತ್ರದಲ್ಲಿನ ಧಾರ್ಮಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ವೀಕ್ಷಿಸಿದರು.

## ಸಾಧಕ ಹಿರಿಯ ವಿದ್ಯಾರ್ಥಿಗಳು

### ಲೀಡ್ಕರ್ ಸಂಸ್ಥೆಯ ರಾಯಭಾರಿಯಾಗಿ ಶ್ರೀ ಧನಂಜಯ ಆಯ್ಕೆ



ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿಯರಿಂಗ್ ಕಾಲೇಜಿನ ಹಿರಿಯ ವಿದ್ಯಾರ್ಥಿ ಹಾಗೂ ಕಲಾವಿದರಾದ ಶ್ರೀ ಧನಂಜಯರವರು ರಾಜ್ಯ ಸರ್ಕಾರದ ಲೀಡ್ಕರ್ ಸಂಸ್ಥೆಯ ಪ್ರಚಾರ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ. ಕಾಯಕ ವರ್ಗದ ಕುಶಲಕರ್ಮಿಗಳ ಅದ್ಭುತ ಕಲಾಕೃತಿಗಳನ್ನು ರಾಜ್ಯದ ಜನರಿಗೆ ವ್ಯಾಪಕವಾಗಿ ತಲುಪಿಸುವ ಈ ಸಂಸ್ಥೆಯ ಪ್ರಚಾರ ರಾಯಭಾರಿಯಾಗಲು ತುಂಬ ಹೆಮ್ಮೆಯಿದೆ. ಇಂತಹ ಒಳ್ಳೆಯ ಕೆಲಸಕ್ಕೆ ನನ್ನನ್ನು ಆಯ್ಕೆ ಮಾಡಿದ್ದಕ್ಕೆ ಸರ್ಕಾರಕ್ಕೆ ಧನ್ಯವಾದಗಳು ಎಂದು ಅವರು ಹೇಳಿದ್ದಾರೆ.

### ಶ್ರೀ ಪ್ರದೀಪ್ ದೇವನೂರುಗೆ ಎಮಿನೆಂಟ್ ಇಂಜಿನಿಯರ್ ಪ್ರಶಸ್ತಿ



ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನಲ್ಲಿ 2006ರಲ್ಲಿ ಇಂಜಿನಿಯರಿಂಗ್ ಪದವಿ ಪಡೆದಿರುವ ಶ್ರೀ ಪ್ರದೀಪ್ ದೇವನೂರುಗೆ ಏಷ್ಯಾನೆಟ್ ಸುವರ್ಣ ನ್ಯೂಸ್ ಮತ್ತು ಕನ್ನಡಪ್ರಭ ದಿನಪತ್ರಿಕೆ ವತಿಯಿಂದ ನೀಡುವ ಎಮಿನೆಂಟ್ ಇಂಜಿನಿಯರ್ ಪ್ರಶಸ್ತಿ ದೊರೆತಿದೆ. 2007ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಕರ್ನಾಟಕ ಇಂಜಿನಿಯರಿಂಗ್ ಸರ್ವೀಸ್ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆಗಿ ಸೇವೆ ಆರಂಭಿಸಿದರು. ರಾಜಸ್ವ ಸಂಗ್ರಹ ಹೆಚ್ಚಳದಲ್ಲಿ ಅದ್ವಿತೀಯ ಸಾಧನೆ ಮತ್ತು ಇಲಾಖೆ ವ್ಯಾಪ್ತಿಯಲ್ಲಿ ಉತ್ಕೃಷ್ಟ ಗುಣಮಟ್ಟದ ಕಟ್ಟಡಗಳ ತ್ವರಿತ ನಿರ್ಮಾಣ ಕಾರ್ಯದಲ್ಲಿ ಸಾಧನೆ ಮಾಡಿದ್ದಾರೆ.

## ಸಂವಿಧಾನ ದಿನಾಚರಣೆ

### ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 27.11.2023ರಂದು ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಭಾರತ ಸಂವಿಧಾನವು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಜಾತ್ಯಾತೀತತೆ ಇಂತಹ ಹಲವು ವಿಶಿಷ್ಟ ಲಕ್ಷಣಗಳನ್ನೊಳಗೊಂಡ ಸಂವಿಧಾನವಾಗಿದೆ. ಈ ಸಂವಿಧಾನ ರಚನೆಯಲ್ಲಿ ಸಂವಿಧಾನ ರಚನಾಕಾರರ ಧ್ಯೇಯೊದ್ದೇಶಗಳನ್ನು ಸಾಕಾರಗೊಳಿಸುವ ಕಾರ್ಯ ನಮ್ಮೆಲ್ಲರದ್ದಾಗಿದೆ. ನಮ್ಮ ಸಂವಿಧಾನವು ಒಂದು ಬೃಹತ್ ಲಿಖಿತ ದಾಖಲೆಯಾಗಿದ್ದು, ಹಕ್ಕು, ಕರ್ತವ್ಯ, ಆಡಳಿತ ವ್ಯವಸ್ಥೆ ಇವೆಲ್ಲದರ ಮಾರ್ಗದರ್ಶಿಯಾಗಿದೆ ಎಂದು ತಿಳಿಸಿದರು. ಸಂವಿಧಾನದ ಪ್ರಸ್ತಾವನೆಯನ್ನು ಪ್ರತಿಜ್ಞಾವಿಧಿಯನ್ನಾಗಿ ಬೋಧಿಸಿದರು.

ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಎಂ.ಪಿ ಮಹದೇವಸ್ವಾಮಿಯವರು ಸಂವಿಧಾನ ದಿನದ ಆಶಯ, ಸಂವಿಧಾನ ರಚನಾ ಸಭೆಯ ರಚನೆ, ಕರಡು ಸಮಿತಿಯ ರಚನೆ ಮತ್ತು ಅಂಬೇಡ್ಕರ್‌ರವರ ಪಾತ್ರ, ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಮಹತ್ವದ ಬಗ್ಗೆ ಮಾತನಾಡಿ, ಸಂವಿಧಾನ ರಚನಾ ಸಭೆಯ ಆಶೋತ್ತರಗಳಿಗೆ ಅನುಸಾರವಾಗಿ ಭವಿಷ್ಯ ಭಾರತ ನಿರ್ಮಾಣಕ್ಕೆ ನಾವೆಲ್ಲರೂ ಬದ್ಧರಾಗಿರಬೇಕಾಗಿದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ಪ್ರತಿಭಾರವರು ಸ್ವಾಗತಿಸಿ ಸಂವಿಧಾನ ದಿನದ ಔಚಿತ್ಯ ಕುರಿತು ತಿಳಿಸಿದರು. ಕಾರ್ಯಕ್ರಮದಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಆರ್.ಜಿ. ಆಶಾರವರು ಕಾರ್ಯಕ್ರಮವನ್ನು ನಿರೂಪಿಸಿದರು.

### ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

